ಸಿಸಿ ಸಂಖ್ಯೆ.**03/2021** ಡಿ.ಡಬ್ಲ್ಯೂ- **2**

ಸಾಕ್ಷಿಯು ದಿನಾಂಕ **26.02.2026** ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ನೀಡಲಾಯಿತು.

ಆರೋಪಿಯ ಪರ ವಿಚಾರಣೆಃ ಶ್ರೀ ಡಿ ಆರ್ ಎಮ್ ನ್ಯಾಯಾವಾದಿಗಳಿಂದ

| | |
|---|---|
| ಹೆಸರು | ಸಂತೋಷ್.ಆರ್ |
| ತಂದೆಯ ಹೆಸರು | ರಾಜು |
| ವಯಸ್ಸು | 38 ವರ್ಷ |
| ವೃತ್ತಿ | ವ್ಯವಸಾಯ ಮತ್ತು ಕಾರಿನ ಚಾಲಕ |
| ವಿಳಾಸ | ಶ್ರೀನಗರ, ಬೆಂಗಳೂರು |

ನಾನು, ಈ ಪ್ರಕರಣದ ಆರೋಪಿ, ಈಶ್ವರಯ್ಯ ಮತ್ತು ಇನ್ನು ಮೂರು ಜನ ಪರಸ್ಪರ ಸ್ನೇಹಿತರಾಗಿರುತ್ತೇವೆ. **2016-17** ರ ಸಾಲಿನಲ್ಲಿ ಶ್ರೀನಿವಾಸ ಎಂಬುವವರು ಚೀಟಿ ನಡೆಸುತ್ತಾರೆ ನೀವು ಸೇರಿಕೊಳ್ಳುತ್ತೀರಾ ಎಂದು ನನ್ನನ್ನು ಈ ಮೇಲೆ ಹೇಳಿದ ಈಶ್ವರಯ್ಯ ಮತ್ತು ಆರೋಪಿಯು ಹೇಳಿದ್ದರು, ಅದರಂತೆ ನಾನು ಸಹ ಶ್ರೀನಿವಾಸರವರು ನಡೆಸುತ್ತಿದ್ದ ಚೀಟಿ ವ್ಯವಹಾರಕ್ಕೆ ಸದಸ್ಯನಾಗಿದ್ದೆ. ಚೀಟಿ ವ್ಯವಹಾರವು ಒಂದು ಲಕ್ಷ ರೂ.ಗಳ ವ್ಯವಹಾರವರಗಿದ್ದು ಪ್ರತಿ ತಿಂಗಳು ಐದು ಸಾವಿರ ಕಂತು ಆಗಿತ್ತು.

**2.** ಪ್ರತಿ ತಿಂಗಳ **10** ನೇ ತಾರೀಖಿನಂದು ಕಂತನ್ನು ಪಾವತಿಸುತ್ತಿದ್ದೇ, **11** ನೇ ಕಂತಿನಲ್ಲಿ ನಾನು **72** ಸಾವಿರ ರೂ.ಗಳನ್ನು ತೆಗೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಶ್ರೀನಿವಾಸರವರು ಸದರಿ ಮೊತ್ತಕ್ಕೆ ಸೂರಿಟಿಯನ್ನು ಕೇಳಿದ್ದರು ಹಾಗಾಗಿ ನಾನು ನನಗೆ ಸೇರಿದ ಚೆಕ್ ಅನ್ನು ಭದ್ರತೆಗಾಗಿ ಶ್ರೀನಿವಾಸರವರಿಗೆ ಕೊಟ್ಟಿದ್ದೆ. ಆರೋಪಿಯು ತಾನು **12** ನೇ ಚೀಟಿಯನ್ನು ಎತ್ತಿಕೊಂಡು ಅದರ ಭದ್ರತೆಗಾಗಿ ತಾನು ಸಹ ಶ್ರೀನಿವಾಸರವರಿಗೆ ಚೆಕ್ ಅನ್ನು ಕೊಟ್ಟಿರುವುದಾಗಿ ನನಗೆ ಹೇಳಿದ್ದರು.

**3. 20** ನೇ ತಿಂಗಳಿಗೆ ಚೀಟಿ ವ್ಯವಹಾರವು ಮುಗಿದಿದ್ದು, ಚೀಟಿ ವ್ಯವಹಾರ ಮುಗಿದ ಎರಡು ತಿಂಗಳಿಗೆ ನಾನು ನನ್ನ ಚೆಕ್ ಅನ್ನು ಕೇಳಿದ್ದು, ಆಗ ಶ್ರೀನಿವಾಸರವರು ನನ್ನ ಚೆಕ್ ಅನ್ನು ನನಗೆ ವಾಪಸ್ಸು ಮಾಡಿರುತ್ತಾರೆ. ಮತ್ತೆ ಚೀಟಿ ಹಾಕುವಂತೆ ಆರೋಪಿಗೆ ಹೇಳಿ ಆರೋಪಿಯ ಚೆಕ್ ಅನ್ನು ಆರೋಪಿಗೆ ವಾಪಸ್ಸು ಮಾಡದೇ ಶ್ರೀನಿವಾಸರವರು ತನ್ನ ಬಳಿಯೇ ಇಟ್ಟುಕೊಂಡಿದ್ದರು. ಸದರಿ ಶ್ರೀನಿವಾಸರವರು ತನ್ನ ಸಹೋದರ ಪಿರ್ಯಾದಿಯ ಮುಖಾಂತರ ಚೆಕ್ ಪ್ರಕರಣವನ್ನು ಹಾಕಿದ್ದಾರೆ ಎಂದು ಆನಂತರ ನನಗೆ ತಿಳಿಯಿತು.

**4.** ಹಾಗಾಗಿ ನನಗೆ ಗೊತ್ತಿರುವ ವಿಚಾರವನ್ನು ನಾನು ನ್ಯಾಯಾಲಯದಲ್ಲಿ ಹೇಳುತ್ತೇನೆ ಎಂದು ಹೇಳಿ ಈ ದಿನ ನಾನು ನ್ಯಾಯಾಲಯಕ್ಕೆ ಬಂದು ನನಗೆ ಗೊತ್ತಿರುವ ವಿಚಾರವನ್ನು ಹೇಳುತ್ತಿದ್ದೇನೆ. ಪಿರ್ಯಾದಿಯು ಆರೋಪಿಯ ವಿರುದ್ದ ಸುಳ್ಳು ಚೆಕ್ ಪ್ರಕರಣವನ್ನು ದಾಖಲಿಸಿದ್ದು, ಅವರನ್ನು ಆರೋಪದಿಂದ ಖುಲಾಸೆಗೊಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀಸವಾಲುಃ ಫಿರ್ಯಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ.